'ಸಿನಿಮಾ ಬಂಡಿ' ಚಿತ್ರದ ನಾಯಕನಟ ವಿಕಾಸ್ ವಸಿಷ್ಠ ವಿಶೇಷ ಸಂದರ್ಶನ

# 'ಸವಾಲಿನ ದಾರಿಯಲ್ಲಿ ಸಿಕ್ಕ ಹಬ್ಬದೂಟ

ಇತ್ತೀಚೆಗೆ ನೆಟ್‌ಫ್ಲಿಕ್ಸ್‌ನಲ್ಲಿ ತೆರೆಕಂಡು ಸಾಕಷ್ಟು ಸದ್ದು ಸುದ್ದಿ ಮಾಡುತ್ತಿರುವ ತೆಲುಗು ಚಿತ್ರ 'ಸಿನಿಮಾ ಬಂಡಿ'. ಎಲ್ಲರೊಳಗೊಬ್ಬ ಚಿತ್ರಕರ್ಮಿಯಿದ್ದಾನೆ ಎನ್ನುವುದನ್ನು ಹೇಳುತ್ತಲೇ ಎಲ್ಲರೊಳಗಿನ ಮಾನವೀಯ ಸೆಲೆಯನ್ನು ಜೀವಂತಗೊಳಿಸುವ ಈ ಸಿನಿಮಾದ ಮುಖ್ಯಪಾತ್ರದಲ್ಲಿ ನಟಿಸಿರುವ ವಿಕಾಸ್ ವಸಿಷ್ಠ ಕನ್ನಡಿಗ. ಕನ್ನಡದಲ್ಲಿಯೇ ಕಂಡ ಕನಸು ತೆಲುಗಿನಲ್ಲಿ ಫಲ ಕೊಟ್ಟ ಖುಷಿಯಲ್ಲಿ ಅವರಿದ್ದಾರೆ. ತಮ್ಮ ಸಿನಿಮಾಬದುಕಿನ ಬಗ್ಗೆ, ಮುಂದಿನ ಕನಸುಗಳ ಬಗ್ಗೆ ವಿಕಾಸ್ ಸುಧಾ ಜೊತೆಗೆ ಮನಬಿಚ್ಚಿ ಮಾತಾಡಿದ್ದಾರೆ.

■ ಪದ್ಮನಾಭ ಭಟ್



ವಿಕಾಸ್ ವಸಿಷ್ಠ

**◆ ನಟನೆಯ ಗುಂಗು ನಿಮಗೆ ಅಂಟುವಲ್ಲಿ ನಿಮ್ಮ ಪರಿಸರದ ಪ್ರಭಾವ ಏನಾದರೂ ಇದೆಯೇ?**

ನಾನು ಹುಟ್ಟಿದ್ದು ಕೋಲಾರ ಜಿಲ್ಲೆಯ ಬಂಗಾರಪೇಟೆ ತಾಲ್ಲೂಕಿನ ಹುದುಕುಳ ಎಂಬ ಹಳ್ಳಿಯಲ್ಲಿ. ಅಲ್ಲಿಯೇ ಪ್ರಾಥಮಿಕ ವಿದ್ಯಾಭ್ಯಾಸ ಮುಗಿಸಿದ್ದು. ನಮ್ಮ ತಂದೆ ಬಿಇಎಂಎಲ್‌ನಲ್ಲಿ ಕೆಲಸ ಮಾಡುತ್ತಿದ್ದರು. ಅವರ ವೃತ್ತಿನಿಮಿತ್ತ ಅಲ್ಲಿಂದ ಕೆಜಿಎಫ್ ಸಮೀಪದ ಒಂದು ಹಳ್ಳಿಗೆ ಹೋದೆವು. ಅಲ್ಲಿಯೇ ಕಾಲೇಜು ಓದಿದ್ದು. ನಂತರ ಮತ್ತೆ ಬಂಗಾರಪೇಟೆಗೆ ಬಂದು ನೆಲೆಯಾದೆವು. ಬಿ.ಕಾಂ., ಎಂ.ಬಿ.ಎ. ಮುಗಿಸಿ ನಾನು ಬೆಂಗಳೂರಿಗೆ ಬಂದು ಐಟಿ ಕಂಪನಿಯಲ್ಲಿ ಕೆಲಸಕ್ಕೆ ಸೇರಿಕೊಂಡೆ.

ನಟನೆಯ ಕಡೆಗೆ ಒಲವು ಸಣ್ಣ ವಯಸ್ಸಿಂದ ಇದ್ದಿದ್ದೇನಲ್ಲ. ಶಾಲಾದಿನಗಳಲ್ಲಿ ಒಂದು ನಾಟಕ ಮಾಡಿದ್ದೆ. ಆ ಅನುಭವ ನನಗೆ ಯಾವಾಗಲೂ ಕಾಡುತ್ತಿತ್ತು. ಯಾವುದಾದರೂ ನಾಟಕ ನೋಡಿದಾಗ, ಸ್ನೇಹಿತರು ನಾಟಕದ ಬಗ್ಗೆ ಮಾತಾಡಿದಾಗೆಲ್ಲ ನನಗೆ ಆ ನಾಟಕದ ನೆನಪೇ ಕಾಡುತ್ತಿತ್ತು. ಬಹುಶಃ ಅದೇ ಅನುಭವ ನನ್ನನ್ನು ನಟನೆಯ ಕಡೆಗೆ ಹೊರಳುವಂತೆ ಮಾಡಿತೇನೋ.

**◆ ಐಟಿ ಕ್ಷೇತ್ರದಲ್ಲಿ ನೌಕರಿಯಲ್ಲಿದ್ದವರು ನಟನೆಯನ್ನೇ ವೃತ್ತಿಯಾಗಿಸಿಕೊಳ್ಳುವುದು ಸವಾಲಿನ ನಿರ್ಧಾರವಲ್ಲವೇ?**

ನನಗೆ ಮೊದಲಿನಿಂದಲೂ ಕ್ರಿಕೆಟ್ ಹುಚ್ಚಿತ್ತು. ಊಟ, ತಿಂಡಿ ಬಿಟ್ಟು ಕ್ರಿಕೆಟ್ ಆಡುತ್ತಿದ್ದೆವು. ಅಲ್ಲಿಯೇ ನಾನು ಸವಾಲುಗಳನ್ನು ಸ್ವೀಕರಿಸುವುದು ಮತ್ತು ನಿಭಾಯಿಸುವುದನ್ನು ಕಲಿತಿದ್ದು. ಐಟಿ ಕ್ಷೇತ್ರದಲ್ಲಿ ಏಕತಾನತೆ ಕಾಡುತ್ತಿತ್ತು. ಸಂಪಾದನೆ ಇತ್ತು. ಆದರೆ ಏನೋ ಮಿಸ್ ಮಾಡಿಕೊಳ್ಳುತ್ತಿದ್ದೇನೆ ಅನಿಸುತ್ತಿತ್ತು. ಅದು ಸೃಜನಶೀಲತೆ ಎನ್ನುವುದು ಆಮೇಲೆ ಗೊತ್ತಾಯ್ತು. ಸೃಜನಶೀಲ ಕ್ಷೇತ್ರದಲ್ಲಿಯೇ ಏನಾದರೂ ಮಾಡಬೇಕು ಎಂದು ನಿರ್ಧರಿಸಿದೆ. ಈ ನಿರ್ಧಾರ ತೆಗೆದುಕೊಳ್ಳುವಾಗ ನನಗೆ ನಟನೆಯ ಬಗ್ಗೆ ಏನೂ ಗೊತ್ತಿರಲಿಲ್ಲ. ಡೈರೆಕ್ಟರ್ ಆ್ಯಕ್ಷನ್ ಅಂತ ಹೇಳಿದಾಗ ಏನು ಮಾಡಬೇಕು ಎಂದೂ ಗೊತ್ತಾಗದೆ ಮುಖ ಮುಖ ನೋಡುವ ಪರಿಸ್ಥಿತಿಯಲ್ಲಿ ನಾನು ನಟನೆಗೆ ಹೊರಳಿಕೊಂಡಿದ್ದು.

**◆ ನಟನೆಯ ಅವಕಾಶಗಳು ಸಿಕ್ಕಿದ್ದು ಹೇಗೆ?**

ನಾನು ನಟನಾಗಬೇಕು, ಸಿನಿಮಾ ಕ್ಷೇತ್ರದಲ್ಲಿ ಏನಾದರೂ ಮಾಡಬೇಕು ಎಂದು